**ಕರ್ನಾಟಕ ಸರಕಾರ**

# ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟೆ

**ದೂರವಾಣಿ ಸಂಖ್ಯೆ-9480849233 (ಬೆಳಿಗ್ಗೆ 10.00 ಗಂಟೆಯಿಂದ ಸಾಯಂಕಾಲ 5.30 ರವರೆಗೆ ಕರೆ ಮಾಡಬಹುದು)**
**9480849234**

ಇತ್ತೀಚಿನ
ಭಾವಚಿತ್ರ

ಗೆ,

ಮುಖ್ಯ ಇಂಜಿನೀಯರರು,
ಬಾ.ಪ.ಅ.ಪ್ರಾ, ಬಾಗಲಕೋಟ

ಮಾನ್ಯರೆ,

ವಿಷಯ: ವಸತಿ/ವಾಣಿಜ್ಯ ಮೂಲೆ ನಿವೇಶನಗಳ ಬಹಿರಂಗ ಹರಾಜಿನಲ್ಲಿ ಬಾಗವಹಿಸಲು ವಯಕ್ತಿಕ ವಿವರಗಳು ಒದಗಿಸುವ ಕುರಿತು.

ಉಲ್ಲೇಖ: ಹರಾಜು ಪ್ರಕಟಣೆ ಸಂ.ಮುಅ/ಬಾ.ಪ.ಅ.ಪ್ರಾ/ಸಿಆರ್/2017-18/2953 ದಿನಾಂಕ: 17.07.2017

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಿತ ಪ್ರಕಟಣೆ ಅನ್ವಯ ವಸತಿ/ವಾಣಿಜ್ಯ ಮೂಲೆ ನಿವೇಶನಗಳ ಬಹಿರಂಗ ಹರಾಜಿನಲ್ಲಿ ಬಾಗವಹಿಸಲು ಇಚ್ಛಿಸಿ, ರಹವಾಸಿ ಆಧಾರ ಪತ್ರ ಲಗತ್ತಿಸಿ, ಈ ಕೆಳಗಿನಂತೆ ನನ್ನ ವಯಕ್ತಿಕ ವಿವರಗಳನ್ನು ಸಲ್ಲಿಸುತ್ತಿದ್ದೇನೆ.

1. ಪೂರ್ಣ ಹೆಸರು ಮತ್ತು ಅಡ್ಡ ಹೆಸರು :
2. ತಂದೆ/ಗಂಡನ ಹೆಸರು :
3. ಪೂರ್ಣ ವಿಳಾಸ :

____________________

____________________

ಪಿನ್ ಕೋಡ್

ಮೊಬೈಲೆ ಸಂಖ್ಯೆ :

ಸ್ಥಿರ ದೂರವಾಣಿ ಸಂಖ್ಯೆ :

ಡಿ.ಡಿ.ಸಂ :

4. ಮುಂಗಡ ಹಣ : 1). ರೂ. 25000/- (ವಸತಿ ಎ,ಬಿ, ಎನ್‌ಪಿ-ಎಸ್ ಮಾದರಿಗಾಗಿ)
(ವಾಣಿಜ್ಯ ಎ,ಎ1,ಬಿ,ಬಿ1,ಬಿ2,ಸಿ,ಸಿ1,ಸಿ4,ಎಸ್,ಎಸ್‌ಆರ್ ಮತ್ತು ವಿಎಫ್ ಮಾದರಿಗಾಗಿ)

2). ರೂ. 50000/- (ವಸತಿ ಸಿ,ಡಿ,ಡಿ1,ಡಿ2,ಇ,ಇಸ್ಪೇಷಲ್,ಇ1,ಇ2,ಇ3,ಇ4,ಎನ್‌ಪಿ-ಎಮ್ ಮತ್ತು ಎನ್‌ಪಿ-ಎಲ್ ಮಾದರಿಗಾಗಿ)
(ವಾಣಿಜ್ಯ ಡಿ,ಇ,ಇ1,ಎಫ್1,ಎಮ್ ಮತ್ತು ಆಡ್ ಮಾದರಿಗಾಗಿ)

ಲಗತ್ತು : 1).ರಹವಾಸಿ ಪತ್ರ 2).ಪಡಿತರ ಚೀಟಿ 3).ಚುನಾವಣೆ ಗುರ್ತಿನ ಚೀಟಿ 4).ಫೋನ್ ಬಿಲ್ಲು 5).ಪಾನ ಕಾರ್ಡ 6).ಡ್ರೈವಿಂಗ್ ಲೈಸೆನ್ಸ್ 7.ಆಧಾರ ಕಾರ್ಡ ಯಾವುದಾದರೂ ಒಂದು ಸ್ವಯಂ ದೃಢೀಕರಿಸಿದ ಗುರುತಿನ ಚೀಟಿ
(ಸದರ ದಾಖಲೆಗಳಲ್ಲಿ ಲಗತ್ತಿಸಿದ ಪ್ರತಿಗೆ ಗುರುತು ಮಾಡುವುದು)

ದಿನಾಂಕ: (ಅರ್ಜಿದಾರರ ಸಹಿ)

**(ಹರಾಜು ನಡೆಯವ ಸ್ಥಳ: ನವನಗರದ ಸೆಕ್ಟರ್ ಸಂ. 37ರಲ್ಲಿಯ ಅಂಬೇಡ್ಕರ ಭವನದಲ್ಲಿ)**
**(ಹರಾಜು ಪ್ರಾರಂಭ ದಿನಾಂಕ: 16.08.2017)**
**(ಅರ್ಜಿಯನ್ನು ಡಿ.ಡಿ ಯೊಂದಿಗೆ ಸ್ವೀಕರಿಸುವ ಕೊನೆಯ ದಿನಾಂಕ: 14.08.2017 ಸಂಜೆ 5-30 ಗಂ. ವರೆಗೆ )**
**(ಅರ್ಜಿಯನ್ನು ದಾಖಲಾತಿಯೊಂದಿಗೆ ದ್ವಿ-ಪ್ರತಿಯಲ್ಲಿ ಸಲ್ಲಿಸುವುದು)**
**ನಕ್ಷೆ ಹಾಗೂ ನಿವೇಶನಗಳ ಮಾಹಿತಿಯನ್ನು www.btda.kar.nic.in ನಲ್ಲಿ ಪಡೆಯಬಹುದು**
**(ಹರಾಜು ಪ್ರಕ್ರಿಯೇ ಮುಗಿದ ನಂತರ ಬಿಡ್ ಯಶಸ್ವಿಯಾಗಲಾರದವರಿಗೆ ಡಿ.ಡಿ ಮರಳಿ ಪಡೆಯತಕ್ಕದ್ದು)**

ಸೂಚನೆ:

1. ಹರಾಜಿನಲ್ಲಿ ಬಾಗ ವಹಿಸಲು ನೊಂದಾಯಿಸಿರುವ ಯಶಸ್ವಿ ಬಿಡ್‌ದಾರರು ಹೆಸರಿನಲ್ಲಿಯೇ ನಿವೇಶನದ ದಾಖಲೆಗಳನ್ನು ನೀಡಲಾಗುವುದು. ತದನಂತರ ಹೆಸರು ಬದಲಾವಣೆಗೆ ಅವಕಾಶವಿರುವುದಿಲ್ಲ.
2. ನಿಗಧಿಪಡಿಸಿದ ಹರಾಜಿನ ದಿನದಂದು ಯಾವುದೇ ಸಾರ್ವತ್ರಿಕ ರಜೆ ಘೋಷಣೆಯಾದಲ್ಲಿ ಅಂದಿನ ಹರಾಜನ್ನು ಮುಂದಿನ ಕಛೇರಿ ಕೆಲಸದ ದಿನದಂದು ನಡೆಸಲಾಗುವುದು.

## ಬಹಿರಂಗ ಹರಾಜಿನ ನಿಬಂಧನೆ ಹಾಗೂ ಷರತ್ತುಗಳು

1. ಆಸಕ್ತಿಯುಳ್ಳವರು ಹರಾಜಿಗೆ ಸೂಚಿಸಿರುವ ನಿವೇಶನಗಳನ್ನು ಮುಂಚಿತವಾಗಿಯೇ ನೋಡಬಹುದಾಗಿರುತ್ತದೆ. ಸದರಿ ನಿವೇಶನಗಳನ್ನು ಎಲ್ಲಿವೆಯೋ ಹೇಗಿವೆಯೋ ಹಾಗೆಯೇ ಹರಾಜು ವಿಲೇವಾರಿ ಮಾಡಲಾಗುವುದು.
2. ನಿವೇಶನಗಳ ಸ್ಥಳ ಸೂಚಿಸುವ ನಕ್ಷೆಗಳನ್ನು ಪ್ರಾಧಿಕಾರದ ಮುಖ್ಯ ಇಂಜಿನೀಯರವರ ಕಛೇರಿಯ ನೋಟಿಸು ಬೋರ್ಡಿಗೆ ಲಗತ್ತಿಸಲಾಗಿದೆ.
3. ಹರಾಜಿನಲ್ಲಿ ಬಾಗವಹಿಸುವವರ "ಎ, ಬಿ, ಎಸ್‌ಪಿಎಸ್" ಮಾದರಿ ವಸತಿ ನಿವೇಶನಗಳಿಗೆ ಹಾಗೂ ವಾಣಿಜ್ಯ "ಎ, ಎ1, ಬಿ, ಬಿ1, ಬಿ2, ಸಿ, ಸಿ1, ಸಿ4, ವಿಎಫ್, ಎಸ್‌ಆರ್, ಎಸ್" ಮಾದರಿ ನಿವೇಶನಗಳಿಗೆ ರೂ. 25000 (ಇಪ್ಪತ್ತೈದು ಸಾವಿರ ರೂ.ಗಳು ) ಹಾಗೂ " ಸಿ, ಡಿ, ಡಿ1, ಡಿ2, ಇ, ಇಸ್ಪೇಷಲ್, ಇ1, ಇ2, ಇ3, ಇ4, ಎಮ್ ಮತ್ತು ಎಲ್" ಮಾದರಿ ವಸತಿ ಮತ್ತು ವಾಣಿಜ್ಯ "ಡಿ, ಇ, ಇ1, ಎಫ್1, ಎಮ್, ಆಡ್, ಆಡ್" ಮಾದರಿ ನಿವೇಶನಗಳಿಗೆ ರೂ.50000 (ಐವತ್ತು ಸಾವಿರ ರೂ.ಗಳು) ಮುಂಗಡ ಹಣವನ್ನು ಡಿ.ಡಿ ಮೂಲಕ ಪ್ರಾಧಿಕಾರಕ್ಕೆ ಭರಣಾ ಮಾಡಬೇಕು. ಡಿ. ಡಿ. ಯನ್ನು ಮುಖ್ಯ ಲೆಕ್ಕಾಧಿಕಾರಿಗಳು ಬಾ.ಪ.ಅ.ಪ್ರಾ. ಬಾಗಲಕೋಟ (C.A.O BTDA Bagalkot) ಇವರ ಹೆಸರಿನಲ್ಲಿರಬೇಕು. ಯಶಸ್ವಿಯಾಗದ ಬಿಡ್‌ದಾರರ ಡಿ.ಡಿ ಮರಳಿ ಕೊಡಲಾಗುವುದು. ಹರಾಜಿಗೆ ಬಾಗವಹಿಸುವವರು ಪತ್ರಿಕಾ ಪ್ರಟಣೆಯಾದ ದಿನಾಂಕದಿಂದ ಪ್ರಾರಂಬಿಸಿ ಹರಾಜಿನ ಹಿಂದಿನ ಅಂದರೆ ದಿನಾಂಕ: 14.08.2017ರ ವರೆಗೆ ಕಛೇರಿ ವೇಳೆಯಲ್ಲಿ ಅರ್ಜಿಯೊಂದಿಗೆ ಡಿ.ಡಿ ಲಗತ್ತಿಸಿ ನೀಡಬೇಕು. ಹರಾಜಿನ ದಿನಗಳಂದು ಅರ್ಜಿಯನ್ನು ಮತ್ತು ಡಿ.ಡಿ ಗಳನ್ನು ಸ್ವೀಕರಿಸಲಾಗುವುದಿಲ್ಲ.
4. ಪ್ರಾಧಿಕಾರವು ನಿಗಧಿಪಡಿಸಿದ ಅರ್ಜಿ ನಮೂನೆಯನ್ನು ಪಡೆದು ಭರ್ತಿ ಮಾಡಿ, ಡಿ.ಡಿ ಯ ಜೊತೆಗೆ ತಮ್ಮ ಸಂಪೂರ್ಣ ವಿಳಾಸ, ಎರಡು ಭಾವ ಚಿತ್ರಗಳು, ಚುನಾವಣಾ ಕಾರ್ಡ / ಫೋನ್ ಬಿಲ್ಲು / ರೇಶನ್ ಕಾರ್ಡ / ಅಧಾರ ಕಾರ್ಡ ಅಥವಾ ಯಾವುದಾದರೂ ವಾಸದ ದೃಢೀಕರಣ ಪತ್ರ, ಗುರುತಿನ ಚೀಟಿಯನ್ನು ಸ್ವಯಂ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸತಕ್ಕದ್ದು, ಹರಾಜಿನಲ್ಲ ಬಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.
5. ರೂ. 50000 /- ಗಳ ಡಿ.ಡಿ ಪಾವತಿಸಿದವರು ವಸತಿ " ಸಿ, ಡಿ, ಡಿ1, ಡಿ2, ಇ, ಇಸ್ಪೇಷಲ್, ಇ1, ಇ2, ಇ3, ಇ4, ಎಮ್ ಮತ್ತು ಎಲ್" ಮಾದರಿ ವಸತಿ ಮತ್ತು ವಾಣಿಜ್ಯ "ಡಿ, ಇ, ಇ1, ಎಫ್1, ಎಮ್, ಆಡ್, ಆಡ್" ಮಾದರಿ ನಿವೇಶನಗಳಿಗೆ ಮಾತ್ರ ಬಿಡ್ ಮಾಡಲು ಅರ್ಹರಿರುತ್ತಾರೆ. ಸದರಿಯವರು ಒಂದು ವೇಳೆ "ಎ, ಬಿ, ಎಸ್‌ಪಿಎಸ್" ಮಾದರಿ ವಸತಿ ನಿವೇಶನಗಳಿಗೆ ಹಾಗೂ ವಾಣಿಜ್ಯ "ಎ, ಎ1, ಬಿ, ಬಿ1, ಬಿ2, ಸಿ, ಸಿ1, ಸಿ4, ವಿಎಫ್, ಎಸ್‌ಆರ್, ಎಸ್" ಮಾದರಿ ನಿವೇಶನಗಳಿಗೆ ಬಿಡ್ ಮಾಡಲು ಬಯಸಿದಲ್ಲಿ ಪ್ರತ್ಯೇಕ ರೂ.25000 ಗಳ ಡಿ.ಡಿ ಪಡೆದು ಪಾವತಿಸತಕ್ಕದ್ದು. ಎರಡು ಡಿ.ಡಿ ಗಳನ್ನು ಪಡೆದವರು ಮೂರು ಭಾವ ಚಿತ್ರಗಳನ್ನು ಲಗತ್ತಿಸಬೇಕು. ಒಬ್ಬ ವ್ಯಕ್ತಿಯು ಈ ಹರಾಜಿನಲ್ಲಿ ಒಂದು ನಿವೇಶನ ಪಡೆದ ಮೇಲೆ ಮತ್ತೊಂದು ನಿವೇಶನದ ಹರಾಜಿನಲ್ಲಿ ಬಾಗವಹಿಸಲು ಅವಕಾಶವಿರುವುದಿಲ್ಲ. ಒಬ್ಬ ವ್ಯಕ್ತಿಯು ಪ್ರಾಧಿಕಾರದಿಂದ ಒಂದೇ ನಿವೇಶನ ಪಡೆಯಲು ಅರ್ಹರಿರುತ್ತಾರೆ.
6. ಅರ್ಜಿದಾರರು ಖುದ್ದಾಗಿ ಹಾಜರಿರುವುದು ಅವಶ್ಯವಿದ್ದು, ಅನಿವಾರ್ಯ ಕಾರಣಗಳಿಂದ ಹಾಜರಾಗಲು ಆಗದೇ ಇದ್ದಲ್ಲಿ ಅರ್ಜಿದಾರರಿಂದ ಅಧಿಕಾರ ಪತ್ರ ಪಡೆದು ಹರಾಜಿನಲ್ಲಿ ಟೋಕನೊಂದಿಗೆ ಭಾಗವಹಿಸಬಹುದು. ಹಾಗೂ ಇದರಿಂದ ಉದ್ಭವಿಸಬಹುದಾದ ಯಾವುದೇ ತಂಟೆ ತಕರಾರುಗಳಿಗೆ ಪ್ರಾಧಿಕಾರದ ಜವಾಬ್ದಾರಿ ಇರುವುದಿಲ್ಲ.
7. ಯಶಸ್ವಿ ಬಿಡ್‌ದಾರರು ಬಿಡ್ ಮೊತ್ತದ ಪ್ರತಿಶತ 25% ರಷ್ಟನ್ನು ನಿವೇಶನ ಹರಾಜದ 24 ಗಂಟೆಯೊಳಗೆ ಕಚೇರಿ ವೇಳೆಯಲ್ಲಿ ಡಿ.ಡಿ ಮೂಲಕ ಪಾವತಿಸತಕ್ಕದ್ದು, ತಪ್ಪಿದಲ್ಲಿ ಮುಂಗಡ ಹಣವನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಬಿಡ್ ಆದ ನಿವೇಶನವನ್ನು ರದ್ದುಪಡಿಸಲಾಗುವುದು. ಹರಾಜು ಮೊತ್ತಕ್ಕೆ ಮೇಲಾಧಿಕಾರಿಗಳಿಂದ ಅನುಮೋದನೆ ದೊರೆತ ನಂತರ ಉಳಿದ ನಿವೇಶನದ ಮೊತ್ತವನ್ನು ಫಾರ್ಮ ನಂ.1ರ ಅಧೀಕೃತ ತಿಳುವಳಿಕೆ ಪತ್ರದ ಅನುಸಾರ 45 ದಿನಗಳಲ್ಲಿ ಪ್ರಾಧಿಕಾರಕ್ಕೆ ಡಿ. ಡಿ. ಮೂಲಕ ತುಂಬತಕ್ಕದ್ದು. ನಿಗಧಿತ ಅವಧಿಯಲ್ಲಿ ತುಂಬಲು ಸಾಧ್ಯವಾಗದ ಬಿಡ್‌ದಾರರು ಅವಧಿ ವಿಸ್ತರಣೆಗೆ ಮನವಿ ಮಾಡಿಕೊಂಡಲ್ಲಿ ಪ್ರಾಧಿಕಾರವು ಹಣ ತುಂಬುವ ಅವಧಿಯನ್ನು 90 ದಿನಗಳ ವರೆಗೆ ಮಾತ್ರ ವಿಸ್ತರಿಸಬಹುದಾಗಿದೆ. ವಿಸ್ತರಣೆ ಅವಧಿಯಲ್ಲಿಯ ಬಾಕಿ ಮೊತ್ತಕ್ಕೆ ಪ್ರತಿಶತ 18% ರಷ್ಟು ಬಡ್ಡಿಯನ್ನು ನಿಯಮಾನುಸಾರ 500/- ರೂ. ಗಳ ದಂಡದ ಹಣ ಲೆಕ್ಕಹಾಕಿ ತುಂಬತಕ್ಕದ್ದು.
8. ಅತೀ ಹೆಚ್ಚಿನ ಹರಾಜುಬೇಡಿ ನಿಗಧಿತ ಕಾಲಾವಧಿಯಲ್ಲಿ ಪೂರ್ಣ ಹಣ ತುಂಬದೇ ಇರುವ ಬಿಡ್‌ದಾರರ, ಬಾಗಶಃ ತುಂಬಿದ ಹಣವನ್ನು ಸರಕಾರದ ಅಧಿಸೂಚನೆ ಹರಾಜು ಷರತ್ತು ಸಂಖ್ಯೆ: 7(6) ಮತ್ತು 7(7)ರನ್ವಯ ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವದಷ್ಟೆ ಅಲ್ಲದೆ ಅವರ ಜವಾಬ್ದಾರಿಯ ಮೇಲೆ ಸದರ ನಿವೇಶನವನ್ನು ಮರು ಹರಾಜು ಮಾಡಲಾಗುವುದು.
9. ಪ್ರಕಟಿತ ಯಾವುದೇ ಮೂಲೆ ನಿವೇಶನಗಳನ್ನು ಹರಾಜಿನಿಂದ ಕೈಬಿಡುವ ಹಾಗೂ ಹರಾಜನ್ನು ಒಪ್ಪುವ ಅಥವಾ ರದ್ದುಪಡಿಸುವ ಅಧಿಕಾರವು ಪ್ರಾಧಿಕಾರಕ್ಕೆ ಇರುತ್ತದೆ.
10. ನಿವೇಶನ ಅಳತೆ ವಿವರಗಳಲ್ಲಿ ವ್ಯತ್ಯಾಸಗಳೇನಾದರೂ ಒಂದು ವೇಳೆ ಕಂಡು ಬಂದಲ್ಲಿ ಆ ನಿವೇಶನದ ನಿಖರ ಅಳತೆ ಮತ್ತು ವಿಸ್ತೀರ್ಣಕ್ಕೆ ಒಳಪಟ್ಟಿರುತ್ತದೆ.
11. ಈ ಹರಾಜು ಮಾರಾಟವು ಪ್ರಾಧಿಕಾರದ ಷರತ್ತಿಗೊಳಪಟ್ಟು ನಡೆಯುತ್ತದೆ. ಹೆಚ್ಚಿನ ಮಾಹಿತಿಯನ್ನು ಪ್ರಾಧಿಕಾರದ ಮುಖ್ಯ ಇಂಜಿನೀಯರವರ ಕಚೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.
12. ಹರಾಜು ಮಾಡಿದ ನಿವೇಶನಗಳನ್ನು ಭಾಗ/ ವಿಭಾಗ/ (ಸ್ಪ್ಲಿಟ್) ಮಾಡಲು ಅವಕಾಶವಿರುವುದಿಲ್ಲ.
13. ಹರಾಜು ಪ್ರಕ್ರಿಯೆ ಬಾಗಲಕೋಟ ಪಟ್ಟಣ ಪ್ರಾಧಿಕಾರದ (ಮೂಲೆ ನಿವೇಶನಗಳ ಹರಾಜು) ನಿಯಮ 2003ರ/ ಇಂಪ್ರೂಮೆಂಟ್ ಬೋರ್ಡ ಆ್ಯಕ್ಟ್ ಪ್ರಕಾರ ಜರುಗಿಸಲಾಗುತ್ತಿದೆ.
14. ಅಯಾ ನಿವೇಶನಗಳಿಗೆ ನಿಗಧಿಪಡಿಸಿದ ಬಿಡ್‌ನ ಮೂಲ ಮೊತ್ತಕ್ಕೆ 1000/- ರೂ. ಕ್ಕಿಂತ ಮೇಲ್ಪಟ್ಟು ಅಂಕಿಯಿಂದ ಕೂಗುವುದು.
15. ಬಿಡ್‌ನಲ್ಲಿ ವಿಫಲವಾದಲ್ಲಿ ಬಹಿರಂಗ ಹರಾಜು ಪ್ರಕ್ರಿಯೆ ಸಂಪೂರ್ಣ ಮುಕ್ತಾಯವಾದ ನಂತರ ಮುಖ್ಯ ಲೆಕ್ಕಾಧಿಕಾರಿಗಳು ಬಾ.ಪ.ಅ.ಪ್ರಾ. ಬಾಗಲಕೋಟರವರಿಂದ ಪರತ ಪಡೆದುಕೊಳ್ಳಬಹುದು.

**"ಮೇಲಿನ ನಿಭಂದನೆ ಹಾಗೂ ಷರತ್ತುಗಳನ್ನು ಓದಿ ಒಪ್ಪಿಕೊಂಡು ಹರಾಜಿನಲ್ಲಿ ಭಾಗವಹಿಸಲು ಅರ್ಜಿ ಸಲ್ಲಿಸುತ್ತಿದ್ದೇನೆ"**

**(ಅರ್ಜಿದಾರರ ಸಹಿ)**